159

158ನೇ ಅ.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದ ರಾಜು ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 159 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಪ್ರತಿ ವರ್ಷವು ಕೇರಳ ಎಲೆಕ್ಟ್ರಿಕಲ್ ಅಂಡ್ ಅಲೈಡ್ ಇಂಜಿನಿಯರಿಂಗ್ ಕಂಪನಿಯಿಂದಲೇ ಮೂನಾಲ್ಕು ಬಾರಿ ವಿದ್ಯುತ್ ಪರಿವರ್ತಕ (Converters) ಗಳನ್ನು ನೇರವಾಗಿ ಖರೀದಿಸಿದೆ. ಹುಬ್ಬಳ್ಳಿಯಲ್ಲಿರುವ ಎನ್.ಜಿ.ಎಫ್ ಬೆಂಗಳೂರಿನಲ್ಲಿರುವ ಕರ್ನಾಟಕ ವಿದ್ಯುತ್ ಕಾರ್ಖಾನೆಯನ್ನು ಬದಿಗೊತ್ತಿ ಕೇರಳ ಕಂಪನಿಯಿಂದ ಪರಿವರ್ತಕಗಳನ್ನು ಖರೀದಿಸುತ್ತಿರುವ ಬಗ್ಗೆ, ಇಂಧನ ಇಲಾಖೆಯು ಯಾವುದೇ ಸಮರ್ಥನೆಗಳನ್ನು ಒದಗಿಸಿಲ್ಲ.

ಕೇರಳ ಎಲೆಕ್ಟ್ರಿಕಲ್ ಅಂಡ್ ಅಲೈಡ್ ಇಂಜಿನಿಯರಿಂಗ್ ಕಂಪನಿಯಿಂದಲೇ 2019 ರಿಂದ 2025 ರವರೆಗೆ 180.37 ಕೋಟಿ ರೂ ವೆಚ್ಚದಲ್ಲಿ ವಿದ್ಯುತ್ ಪರಿವರ್ತಕಗಳನ್ನು ನೇರವಾಗಿ ಖರೀದಿಸಿದೆ. 2026 ರಲ್ಲಿಯೂ ಇದೇ ಕೇರಳ ಕಂಪನಿಯಿಂದಲೇ 174 ಕೋಟಿ ರೂ. ವೆಚ್ಚದಲ್ಲಿ ವಿದ್ಯುತ್ ಪರಿವರ್ತಕ (Converters) ಗಳನ್ನು ನೇರವಾಗಿ ಖರೀದಿಸಲು ಮುಂದಾಗಿದೆ. ಮತ್ತೊಂದು ವಿಷಯವೆಂದರೇ ಎಲ್ಲಾ ಎಸ್ಕಾಂಗಳಿಗೆ ಅವಶ್ಯಕವಿರುವ ವಿದ್ಯುತ್ ಪರಿವರ್ತಕಗಳನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆಯಿಂದಲೇ ನೇರವಾಗಿ ಖರೀದಿಸಲು ದರ ನಿಗಧಿಪಡಿಸಿದೆ. ಇದೇ ದರವು ಸಮಂಜಸವಾಗಿದೆ. ಎಂದು ಸಮರ್ಥನೆ ನೀಡಿದ್ದ ಇಂಧನ ಇಲಾಖೆಯು ನಂತರ ಕವಿಕಾವನ್ನೇ ಬದಿಗೊತ್ತಿತ್ತು. ಕೇರಳ ಕಂಪನಿ ನೀಡಿದ್ದ ದರವೂ ಸಹ ಕವಿಕಾ ನೀಡಿದ್ದ ದರವೂ ಒಂದೇ ತೆರನಾಗಿತ್ತು. ಆದರೂ ಸಹ ಕೇರಳ ಕಂಪನಿಯಿಂದಲೇ ಖರೀದಿಸುತ್ತಿರುವ ಉದ್ದೇಶವೇನು ಈ ವಿಷಯದ ಕುರಿತು ಮಾನ್ಯ ಇಂಧನ ಸಚಿವರ ಗಮನ ಸೆಳೆದಿರುವ ಬಗ್ಗೆ.

ರಾಜ್ಯದ ರೈತರಿಗೆ/ನಾಗರಿಕರಿಗೆ ಸಕಾಲದಲ್ಲಿ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುವಂತೆ ಆದ್ಯತೆಯ ಮೇಲೆ ವಿದ್ಯುತ್ ಪರಿವರ್ತಕಗಳನ್ನು ಒದಗಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದ 5 ವಿದ್ಯುತ್ ಸರಬರಾಜು ಕಂಪನಿಗಳಿಗೆ ವಾರ್ಷಿಕವಾಗಿ ಸುಮಾರು 50 ರಿಂದ 60 ಸಾವಿರ ಪರಿವರ್ತಕಗಳ ಅವಶ್ಯಕತೆಯಿರುತ್ತದೆ.

ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ ವಾರ್ಷಿಕವಾಗಿ ಅವಶ್ಯಕವಿರುವ ಪರಿವರ್ತಕಗಳನ್ನು ಹಿಂದಿನಿಂದಲೂ ಮೊದಲನೇಯ ಆದ್ಯತೆಯ ಮೇರೆಗೆ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮ:ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತಕ್ಕೆ ಅವರ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ 4(ಜಿ) ವಿನಾಯಿತಿ ಅಡಿಯಲ್ಲಿ ಪರಿವರ್ತಕಗಳನ್ನು ಖರೀದಿಸಲಾಗುತ್ತಿದೆ.

ಈ ಹಿಂದಿನ ಕಳೆದ ಸಾಲುಗಳ ವಿವರಗಳು ಈ ಕೆಳಕಂಡಂತಿವೆ:

| ಕ್ರ. ಸಂ | ಅಧಿಸೂಚನೆ ಸಂಖ್ಯೆ | ವರ್ಷ | ವಿದ್ಯುತ್ ಪರಿವರ್ತಕಗಳ ಸಂಖ್ಯೆ | ಒಟ್ಟು ಮೊತ್ತ (ಕೋಟಿ ಗಳಲ್ಲಿ) | ಎಸ್ಕಾಂಗಳು |
|---|---|---|---|---|---|
| 1 | ಆಇ 292 ವೆಚ್ಚ-12/2020, ದಿನಾಂಕ:03.07.2020 | 2020-21 | 24049 | 248.55 | ಎಲ್ಲಾ ಎಸ್ಕಾಂಗಳಿಗೆ |
| 2 | ಆಇ 368 ವೆಚ್ಚ-12/2021, ದಿನಾಂಕ:12.07.2021 | 2021-22 | 30727 | 273.04 | ಎಲ್ಲಾ ಎಸ್ಕಾಂಗಳಿಗೆ |

...2

| | | | | | |
|---|---|---|---|---|---|
| 3 | ಆಇ 475 ವೆಚ್ಚ-12/2022, ದಿನಾಂಕ:01.09.2022 | 2022-23 | 8135 | 112.72 | ಎಲ್ಲಾ ಎಸ್ಕಾಂಗಳಿಗೆ |
| 4 | ಆಇ 475 ವೆಚ್ಚ-12/2022, ದಿನಾಂಕ:10.08.2023 | 2023-24 | 29055 | - | ಎಲ್ಲಾ ವಿಕಸಂಗಳಿಗೆ |
| 5 | ಆಇ 648 ವೆಚ್ಚ-12/2024, ದಿನಾಂಕ:29.08.2024 | 2024-25 | 23005 | - | ಎಲ್ಲಾ ವಿಕಸಂಗಳಿಗೆ |
| 6 | ಆಇ 648 ವೆಚ್ಚ-12/2024, ದಿನಾಂಕ:07.08.2025 | 2025-26 | 30000 | - | ಎಲ್ಲಾ ವಿಕಸಂಗಳಿಗೆ |

ವಿಸಕಂಗಳಿಗೆ ಆದ್ಯತೆಯ ಮೇರೆಗೆ ಕವಿಕಾ ಸಂಸ್ಥೆಗೆ ಖರೀದಿ ಆದೇಶ ನೀಡಿದ್ದಾಗ್ಯೂ ಹೆಚ್ಚುವರಿ ಪರಿವರ್ತಕಗಳು ಅವಶ್ಯವಿದ್ದಲ್ಲಿ ಟೆಂಡರ್ ಮೂಲಕ ಖಾಸಗಿ ಉತ್ಪಾದಕರಿಂದ ಹಾಗೂ ಇತರೆ ರಾಜ್ಯದ ಸರ್ಕಾರಿ ಸಾಮ್ಯದ ಸಂಸ್ಥೆಗಳಿಂದ (ಕೆ.ಇ.ಎಲ್) ಖರೀದಿಸಲಾಗುತ್ತಿದೆ.

ತುರ್ತು ಸಂದರ್ಭಗಳಲ್ಲಿ ವಿಸಕಂಗಳಿಗೆ ಹೆಚ್ಚುವರಿ ಪರಿವರ್ತಕಗಳ ಅವಶ್ಯಕತೆ ಇದ್ದಲ್ಲಿ ಇತರೆ ಸಂಸ್ಥೆಯ ಪರಿವರ್ತಕಗಳ ಗುಣಮಟ್ಟವನ್ನು ವಿಕಸಂಗಳು ಪರಿಶೀಲಿಸಿ ಇಂಧನ ಇಲಾಖೆಯ ಮೂಲಕ ಆರ್ಥಿಕ ಇಲಾಖೆಗೆ 4(ಜಿ) ವಿನಾಯಿತಿ ನೀಡಲು ಪ್ರಸ್ತಾವನೆಯನ್ನು ಕಳುಹಿಸಲಾಗುತ್ತಿದೆ.

**ಟೆಂಡರ್ ಮೂಲಕ ಖರೀದಿಸಿರುವ ಪರಿವರ್ತಕಗಳ ವಿವರಗಳು ಈ ಕೆಳಕಂಡಂತಿರುತ್ತದೆ.**

| **ಕಳೆದ 3 ವರ್ಷಗಳಲ್ಲಿ ಟೆಂಡರ್ ಮೂಲಕ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳು** | | | | | | | |
|---|---|---|---|---|---|---|---|
| ಕ್ರ ಸಂ | ವಿದ್ಯುತ್ ಸರಬರಾಜು ಕಂಪನಿಯ ಹೆಸರು | 2023-24 | | 2024-25 | | 2025-26 | |
| | | ಪರಿವರ್ತಕಗಳ ಸಂಖ್ಯೆ | ಖರೀದಿಯ ಮೊತ್ತ ರೂ.ಕೋಟಿ ಗಳಲ್ಲಿ | ಪರಿವರ್ತಕಗಳ ಸಂಖ್ಯೆ | ಖರೀದಿಯ ಮೊತ್ತ ರೂ.ಕೋಟಿ ಗಳಲ್ಲಿ | ಪರಿವರ್ತಕಗಳ ಸಂಖ್ಯೆ | ಖರೀದಿಯ ಮೊತ್ತ ರೂ.ಕೋಟಿ ಗಳಲ್ಲಿ |
| 1 | ಬೆಸ್ಕಾಂ | 5900 | 86.93 | 8950 | 89.86 | 10000 | 100.11 |
| 2 | ಸೆಸ್ಕ್ | 918 | 11.94 | 3634 | 47.52 | 7144 | 98.69 |
| 3 | ಮೆಸ್ಕಾಂ | 1450 | 9.56 | 3700 | 52.98 | 5450 | 62.91 |
| 4 | ಹೆಸ್ಕಾಂ | - | - | - | - | 30 | 1.32 |
| 5 | ಜೆಸ್ಕಾಂ | - | - | - | - | 1900 | 28.89 |
| **ಒಟ್ಟು** | | **8268** | **108.43** | **16284** | **190.36** | **24524** | **291.92** |

**ಕೆ.ಇ.ಎಲ್ ಸಂಸ್ಥೆಗೆ ಹಿಂದಿನ 5 ವರ್ಷಗಳಲ್ಲಿ 4ಜಿ ವಿನಾಯಿತಿ ಅಡಿ ವಿದ್ಯುತ್ ಪರಿವರ್ತಕಗಳನ್ನು ಖರೀದಿರಿಸಿರುವ ವಿವರಗಳು ಈ ಕೆಳಕಂಡಂತಿವೆ.**

| **ಕ್ರ. ಸಂ** | **ಅಧಿಸೂಚನೆ ಸಂಖ್ಯೆ** | **ವರ್ಷ** | **ವಿದ್ಯುತ್ ಪರಿವರ್ತಕಗಳ ಸಂಖ್ಯೆ** | **ಒಟ್ಟು ಮೊತ್ತ (ಕೋಟಿಗಳಲ್ಲಿ)** | **ಎಸ್ಕಾಂಗಳು** |
|---|---|---|---|---|---|
| 1 | ಆಇ 500 ವೆಚ್ಚ-12/19 | 2019-20 | - | 78.45 | - |

| | | | | | |
|---|---|---|---|---|---|
| 2 | ಆಇ 368 ವೆಚ್ಚ-12/2021, ದಿನಾಂಕ:12.07.2021 | 2021-22 | 5935 | 39.92 | ಎಲ್ಲಾ ಎಸ್ಕಾಂಗಳಿಗೆ |
| 3 | ಆಇ 475 ವೆಚ್ಚ-12/2022, ದಿನಾಂಕ:01.09.2022 | 2022-23 | 1521 | 15.47 | ಎಲ್ಲಾ ಎಸ್ಕಾಂಗಳಿಗೆ |
| 4 | ಆಇ 704 ವೆಚ್ಚ-12/2023, ದಿನಾಂಕ:16.03.2024 | 2023-24 | 4500 | 69.76 | ಎಲ್ಲಾ ವಿಕಸಂಗಳಿಗೆ |
| 5 | ಆಇ 176 ವೆಚ್ಚ-12/2025, ದಿನಾಂಕ:02.09.2025 | 2025-26 | 2000 | 32.16 | ಜೆಸ್ಕಾಂ |

ಕವಿಕಾ ಸಂಸ್ಥೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಈ ಸರ್ಕಾರವು 2023 ರಿಂದ ಇದುವರೆಗೆ ಕವಿಕಾ ಸಂಸ್ಥೆಯ ಉತ್ಪಾದನೆಯ ಸಾಮರ್ಥ್ಯಕ್ಕೆ ತಕ್ಕಂತೆ (ಸುಮಾರು 30000 ಉತ್ಪಾದನೆಯ ಸಾಮರ್ಥ್ಯ) ಈಗಾಗಲೇ ಸುಮಾರು 85000 ವಿದ್ಯುತ್ ಪರಿವರ್ತಕಗಳನ್ನು ಕವಿಕಾ ಸಂಸ್ಥೆಯಿಂದ ಖರೀದಿಸಲು ವಿನಾಯಿತಿಯನ್ನು ನೀಡಲಾಗಿರುತ್ತದೆ.

ಕೇರಳ ಸರ್ಕಾರದ ಅಂಗಸಂಸ್ಥೆಯಾಗಿರುವ ಕೆಇಎಲ್ ಸಂಸ್ಥೆಗೆ 2019 ರಿಂದಲೂ ತುರ್ತು ಸಂದರ್ಭಗಳಲ್ಲಿ ಎಸ್ಕಾಂಗಳ ಪ್ರಸ್ತಾವನೆಯನ್ನಾಧರಿಸಿ ನಿಗದಿತ ಪರಿವರ್ತಕಗಳನ್ನು ಖರೀದಿಸಲು 4(ಜಿ) ಅಡಿ ವಿನಾಯಿತಿ ನೀಡಲಾಗುತ್ತಿದ್ದು, ಈ ಸರ್ಕಾರದ 3 ವರ್ಷದ ಅವಧಿಯಲ್ಲಿ 2023-24 ಮತ್ತು 2025-26ನೇ ಸಾಲಿನಲ್ಲಿ ಕೇವಲ 6,500 ಪರಿವರ್ತಕಗಳನ್ನು ಮಾತ್ರ ಖರೀದಿಸಲು ವಿನಾಯಿತಿ ನೀಡಲಾಗಿರುತ್ತದೆ.

ಮುಂದುವರೆದು, ಪ್ರಸ್ತುತ ಮೆಸ್ಕಾಂ, ಹೆಸ್ಕಾಂ ಮತ್ತು ಬೆಸ್ಕಾಂ ಗಳಿಗಾಗಿ ಕೆಇಎಲ್ ಕಂಪನಿಯಿಂದ ರೂ.174.73 ಕೋಟಿ ಅಂದಾಜು ವೆಚ್ಚದಲ್ಲಿ ಒಟ್ಟು 11721 ವಿದ್ಯುತ್ ಪರಿವರ್ತಕಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆಯಡಿ 4(ಜಿ) ವಿನಾಯಿತಿ ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪ್ರಸ್ತುತ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ ಹಾಗೂ ಕರ್ನಾಟಕದ ಮತ್ತೊಂದು ಅಂಗಸಂಸ್ಥೆಯಾಗಿರುವ ಎನ್.ಜಿ.ಇ.ಎಫ್ ಸಂಸ್ಥೆಯು 2026-27 ಅವಧಿಗೆ 5000 ವಿದ್ಯುತ್ ಪರಿವರ್ತಕಗಳ ಖರೀದಿಗೆ 4(ಜಿ) ವಿನಾಯಿತಿ ಕೋರಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆ ಹಂತದಲ್ಲಿರುತ್ತದೆ.

ವಿದ್ಯುತ್ ಪರಿವರ್ತಕಗಳ ಪೂರೈಕೆಗಾಗಿ ಕವಿಕಾ ಮತ್ತು ಕೆಇಎಲ್ ಸಂಸ್ಥೆಗಳಿಗೆ ನೀಡಲಾಗಿರುವ 4(ಜಿ) ವಿನಾಯಿತಿ ಅಡಿಯಲ್ಲಿ 2025-26ನೇ ಸಾಲಿನಲ್ಲಿ ಖರೀದಿಸಲಾಗಿರುವ ಪರಿವರ್ತಕಗಳ ದರಗಳ ತುಲನಾತ್ಮಕ ಪಟ್ಟಿಯನ್ನು ಈ ಕೆಳಗೆ ತಿಳಿಸಲಾಗಿದೆ. ಸದರಿ

ದರಗಳನ್ನು ಪರಿಶೀಲಿಸಿದಾಗ ಕೆಇಎಲ್‌ನ ದರಗಳು ಕವಿಕಾ ಕಂಪನಿಗಳ ದರಗಳಿಗಿಂತ ಕಡಿಮೆ ಇರುವುದು ಕಂಡು ಬರುತ್ತದೆ.

**(ರೂ.ಗಳಲ್ಲಿ)**

| **ಕ್ರ. ಸಂ** | **ವಿದ್ಯುತ್ ವಿತರಣಾ ಪರಿವರ್ತಕ (ಸಿ.ಆರ್.ಜಿ.ಒ) ಸಾಮರ್ಥ್ಯ** | | **ಕೆಇಎಲ್ ದರ (Per 1 TC)** | **ಕವಿಕಾ ದರ (Per 1 TC)** |
|---|---|---|---|---|
| 1 | 25 ಕೆವಿಎ | ಸ್ಟಾರ್ 1 | 102722.97 | 115008 |
| 2 | 63 ಕೆವಿಎ | ಸ್ಟಾರ್ 1 | 186875.21 | 224865 |
| 3 | 63 ಕೆವಿಎ | ಸ್ಟಾರ್ 2 | 205862.90 | 247713 |
| 4 | 100 ಕೆವಿಎ | ಸ್ಟಾರ್ 1 | 238639.64 | 287155 |
| 5 | 100 ಕೆವಿಎ | ಸ್ಟಾರ್ 2 | 250302.99 | 301188 |

ಸಂಖ್ಯೆ: ಎನರ್ಜಿ 109 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು